ಇವತ್ತೂ ಅಧೀನ ಕಾರ್ಯದರ್ಶಿ ಸಹಿ ಮಾಡಿರುವ ಉತ್ತರಗಳೇ ಬಂದಿವೆ. ಏಕೆಂದರೆ ಭರವಸೆ ಸಮಿತಿಗೆ ಹೋಗಬೇಕಾದರೆ ಸಚಿವರ ಸಹಿಯಿರುವ ಉತ್ತರವಿರಬೇಕು.

ಅಧ್ಯಕ್ಷರು: ಅದನ್ನು ಸರಿಪಡಿಸೋಣ.

ತಿರುಮಲ ದೇವಸ್ಥಾನದಲ್ಲಿ ಕರ್ನಾಟಕ ವಸತಿಗೃಹ .

17 (139)

ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ತಿರುಮಲ ದೇವಸ್ಥಾನಕ್ಕೆ ಅಧಿಕ ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುವ ರಾಜ್ಯದ ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯದ ಕೊರತೆ ಇರುವುದನ್ನು ಸರ್ಕಾರವು ಮನಗಂಡಿದೆಯೇ;

ಆ) ಹಾಗಿದ್ದಲ್ಲಿ ವಸತಿ ಸೌಕರ್ಯದ ಕೊರತೆ ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ರಾಜ್ಯ ಸಚಿವರು):

ಅ) - ಹೌದು-

ಆ) ತಿರುಮಲ ಶ್ರೀವೆಂಕಟೇಶ್ವರಸ್ವಾಮಿ ದರ್ಶನಕ್ಕಾಗಿ ಬರುವ ಯಾತ್ರಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದ್ದು, ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯ ಒದಗಿಸುವುದು ಕಷ್ಟಕರವಾಗಿದ್ದರೂ ತಂಗಲು ವ್ಯವಸ್ಥೆ ಮಾಡಲಾಗುತ್ತಿದೆ. ಆದಾಗ್ಯೂ ವಸತಿ ಸೌಕರ್ಯದ ಕೊರತೆಯನ್ನು ನೀಗಿಸಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ 105 ಕೊಠಡಿಗಳನ್ನು ದಾನಿಗಳ ಯೋಜನೆಯಡಿ ನಿರ್ಮಿಸಲು ಕ್ರಮ ಕೈಗೊಂಡಿದ್ದು, ಇದನ್ನು ಕಾರ್ಯಗತಗೊಳಿಸುವಷ್ಟರಲ್ಲಿ ಜಮೀನಿನ ಟೈಟಲ್ ಬಗ್ಗೆ ಒಂದು ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಸಂಖ್ಯೆ 21134: 99 ದಾಖಲಿಸಿದ್ದು ಅದರಿಂದಾಗಿ ಮುಂದಿನ ಕ್ರಮ ತೆಗೆದುಕೊಳ್ಳಲು ತೊಡಕಾಗಿದೆ. ಸಾಮಾನ್ಯ ದಿನಗಳಲ್ಲಿ ರೂಮಿನ ತೊಂದರೆ ಇರುವುದಿಲ್ಲ ಆದರೆ ರಥೋತ್ಸವದ ಸಮಯದಲ್ಲಿ ತೊಂದರೆ ಇದೆ. ಅದನ್ನು ನೀಗಿಸುವ ಸಲುವಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಮಾಡಿದ್ದೇವೆ.

ಶ್ರೀ ಎಂ.ಎಸ್.ಆತ್ಮಾನಂದ: ಅಧ್ಯಕ್ಷರೇ, 105 ಕೊಠಡಿಗಳನ್ನು ದಾನಿಗಳ ಯೋಜನೆ ನಿರ್ಮಿಸಲು ಸರ್ಕಾರ ತೀರ್ಮಾನ ಮಾಡಿದೆ, ಇದಕ್ಕೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ತೊಡಕಾಗಿದೆ ಎಂದು ಸಚಿವರು ಹೇಳಿದ್ದಾರೆ. ಆ ಮೊಕದ್ದಮೆಯನ್ನು ಪರಿಹರಿಸಿಕೊಳ್ಳುವ ಪ್ರಯತ್ನವನ್ನು ಸರ್ಕಾರ ಮಾಡಿದೆಯೋ? ಹಾಗೆ ಹಾಲಿ ತಂಗುತ್ತಿರುವ ಕೊಠಡಿಗಳ ಶುಚಿತ್ವವನ್ನು ಮಾಡದಿರುವುದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ, ಸಾರ್ವತ್ರಿಕವಾದುದು. ಯಾತ್ರಾರ್ಥಿಗಳಿಗೆ ಉತ್ತಮ ಸೇವೆ ಒದಗಿಸುವ ಬಗ್ಗೆ ಸರ್ಕಾರ ಏನು ಮಾಡುತ್ತದೆ?

ಶ್ರೀ ಬಾಬುರಾವ್ ಚಿಂಚನಸೂರು: ಅಲ್ಲಿ ಸ್ವಲ್ಪ ನೀರಿನ ತೊಂದರೆ, ಕರೆಂಟ್ ತೊಂದರೆ ಮತ್ತು ಬೆಡ್‌ಶೀಟ್ ತೊಂದರೆ ಇದೆ ಅದಕ್ಕಾಗಿ ಸರ್ಕಾರ ಸುಮ್ಮನೆ ಕೂತಿಲ್ಲ 61 ಲಕ್ಷ ರೂಪಾಯಿಗಳ ಪ್ರಪೋಸಲ್ ಆಗಲೇ ಮಾಡಿದ್ದೇವೆ. 15 ದಿವಸಗಳಲ್ಲಿ ಈ ಕಾರ್ಯಕ್ರಮವನ್ನು ಸರ್ಕಾರ ಕೈಗೆತ್ತಿಕೊಳ್ಳುತ್ತದೆ.

ಶ್ರೀ ಎ.ರಾಮದಾಸ್: ಇಲ್ಲಿ ಪ್ರಮುಖ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಬಹಳ ಆಶ್ಚರ್ಯವಾಗುತ್ತಿದೆ. ಕರ್ನಾಟಕ ಸರ್ಕಾರ ಕೋಟ್ಯಾಂತರ ರೂಪಾಯಿಗಳ ಹಣವನ್ನು ತಿರುಪತಿಯಲ್ಲಿ ಇನ್‌ವೆಸ್ಟ್ ಮಾಡಿದೆ. ಆದರೆ ಆ ಪ್ರಾಪರ್ಟಿಯೇ ಸರ್ಕಾರದ್ದಲ್ಲ, ಆಂಧ್ರಸರ್ಕಾರದಿಂದ ಇನ್ನೂ ಹ್ಯಾಂಡ್ ಓವರೇ ಮಾಡಿಕೊಂಡಿಲ್ಲ ಅನ್ನುವುದಾದರೆ 40 ವರ್ಷಗಳಿಂದ ಕೋಟ್ಯಂತರ ರೂಪಾಯಿಗಳು ಖರ್ಚಾಗಿದೆಯಲ್ಲ ಇದಕ್ಕೆ ಯಾರು ಜವಾಬ್ದಾರಿ? ಸಾರ್ವಜನಿಕ ಮೊಕದ್ದಮೆ ಹೋದ ವ್ಯಕ್ತಿಗೂ ಹಿಂದೆ ಇದ್ದ ಕಾಂಟ್ರಾಕ್ಟ್ ಆಫ್ ಹೋಟೆಲ್‌ಗೂ ಏನು ಸಂಬಂಧ ಇದೆ ಎಂದು ದಯವಿಟ್ಟು ಹೇಳಬೇಕು.

ಶ್ರೀ ಬಾಬುರಾವ್ ಚಿಂಚನಸೂರು: ಅಧ್ಯಕ್ಷರೇ, 7-20 ಎಕರೆ ಜಮೀನನ್ನು ಹಿಂದೆ ಮಹಾರಾಜರು ಖರೀದಿ ಮಾಡಿ ಕೊಟ್ಟಿದ್ದರು. ಇದು ಇನಾಮಿ ಜಮೀನಾಗಿತ್ತು. ಆಂಧ್ರಪ್ರದೇಶ ಸರ್ಕಾರದಲ್ಲಿ ವಿಲೀನವಾಗಿತ್ತು ಈ ಜಮೀನುಗಳು ನಮ್ಮ ಸರ್ಕಾರದ ಹೆಸರಿಗೆ ರೀ-ಗ್ರಾಂಟ್ ಆಗದಿದ್ದು ಟೈಟಲ್ ಇಲ್ಲದಿರುವುದರಿಂದ ಹಿಂದಿನ ಸಚಿವರು ಆಂಧ್ರ ಸರ್ಕಾರದಿಂದ 50 ಅಥವಾ ನೂರು ವರ್ಷಗಳ ದೀರ್ಘಾವಧಿ ಗುತ್ತಿಗೆ ಪಡೆದು ಇತರೆ ಕಟ್ಟಡ ಕಟ್ಟಲು ಉದ್ದೇಶಿಸಿದ್ದರು. ಈ ಬಗೆಗಿನ ಸರ್ಕಾರಿ ಆದೇಶದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ರಿಟ್ ಬಂದಿದ್ದರಿಂದ ಆ ಕಟ್ಟಡದ ನಿರ್ಮಾಣ ನಾವು ನಿಲ್ಲಿಸಿದ್ದೇವೆ. ಇದು ಕೋರ್ಟ್‌ನಲ್ಲಿರುವುದರಿಂದ ನಾವು ಮಾತನಾಡಲು ಬರುವುದಿಲ್ಲ ಅಲ್ಲಿ ತೀರ್ಮಾನವಾದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಅಧ್ಯಕ್ಷರೇ ಒಟ್ಟು ಪ್ರದೇಶವೆಲ್ಲ ಟಿಟಿಡಿಗೆ ಸೇರಿತ್ತು, ಹಿಂದೆ ಮಹಾರಾಜರ ಕಾಲದಲ್ಲಿ ಕೊಟ್ಟದ್ದು. ಅದರ ಬಗ್ಗೆ ತಮ್ಮಲ್ಲಿ ಟೈಟ್ಲ್ ಇದೆಯಾ?

ಒಟ್ಟು ಪ್ರದೇಶ ಎಷ್ಟು? ಮತ್ತು ಇವತ್ತು ಕಟ್ಟುತ್ತಿರುವ 105 ಕೊಠಡಿಗಳ ಸ್ಥಳವೂ ನಮಗೆ ಸೇರಿಲ್ಲ, ಇವತ್ತಿಗೂ ಅದರ ಬಗ್ಗೆ ವಿವಾದ ಇದೆ, ಟಿಟಿಡಿ ವರ್ಸಸ್ ನಮ್ಮ ಮುಜರಾಯಿ ಇಲಾಖೆ ಮಧ್ಯೆ. ಆದರೆ ಸಚಿವರು ಹೇಳುತ್ತಾರೆ ಇಷ್ಟೊಂದು ಹಣ ಮಂಜೂರು ಮಾಡಿಬಿಟ್ಟಿದ್ದೇವೆಂದು. ಯಾವುದೂ ನಕ್ಷೆ ಮಂಜೂರಾಗಿಲ್ಲ. ಜೊತೆಗೆ ಅಲ್ಲಿ ಇರುವ ಕೊಠಡಿಗಳೆಷ್ಟು? ನಮ್ಮ ರಾಜ್ಯದಿಂದ ಪ್ರತಿದಿನ ಅಲ್ಲಿಗೆ ಹೋಗುವ ಯಾತ್ರಾರ್ಥಿಗಳ ಸಂಖ್ಯೆಯೆಷ್ಟು? ಅದಕ್ಕೆ ತಕ್ಕ ಸೌಕರ್ಯಗಳನ್ನು ಸರ್ಕಾರ ಮಾಡಿಕೊಟ್ಟಿದೆಯಾ ಎಂಬುದನ್ನೂ ಸಚಿವರು ತಿಳಿಸಬೇಕು.

ಶ್ರೀ ಬಾಬುರಾವ್ ಚಿಂಚನಸೂರು: ಅಧ್ಯಕ್ಷರೇ, ಅತಿಥಿಗೃಹದಲ್ಲಿ 8 ಕೊಠಡಿಗಳಿವೆ ಪ್ರವಾಸಿಸೌಧದಲ್ಲಿ 88 ಕೊಠಡಿಗಳು, ಕಲ್ಯಾಣ ಮಂಟಪ-1, ಇದಲ್ಲದೆ ಪ್ರವಾಸಿಸೌಧೆದಲ್ಲಿ 200 ರಿಂದ 300 ಜನ ತಂಗಲು ಅವಕಾಶವಿದೆ. ಆದ್ದರಿಂದ ಕೊಠಡಿಗಳ ಸಂಖ್ಯೆಯೇನು ಕಮ್ಮಿ ಇಲ್ಲ, ಶುದ್ಧತೆ ಸಲುವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ನಮ್ಮ ಸರ್ಕಾರ ಬಂದನಂತರ ಇದರ ಬಗ್ಗೆ ಹೆಚ್ಚು ಕಳಕಳಿ ವಹಿಸಿ ಮುಖ್ಯಮಂತ್ರಿಗಳು ಇದನ್ನು ಮಾಡಬೇಕೆಂದಿದ್ದಾರೆ. ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಮ್ಮ ಇಲಾಖೆಯಿಂದ 61 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೇವೆ. ಲಕ್ಷಾವಧಿ ಭಕ್ತರು ಬರುವಂಥ ಈ ಜಾಗದಲ್ಲಿ ಯಾವುದೇ ತೊಂದರೆ ಆಗದಂತೆ ಎಲ್ಲ ಅನುಕೂಲ ಮಾಡಿದ್ದೇವೆ. ನಮ್ಮ ಅಧಿಕಾರಾವಧಿಯಲ್ಲಿ ಒಳ್ಳೆಯ ರೀತಿಯಿಂದ ಇದನ್ನು ಮಾಡುತ್ತೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಬಹಳ ಮುಖ್ಯವಾದ ಒಂದು ವಿಚಾರ. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ನಾನು ಹೈಕೋರ್ಟಿನಲ್ಲಿ ಹಾಕಿ ಅಲ್ಲಿಂದ ಸರ್ಕಾರದ ಚೌಲ್ಟ್ರಿಯನ್ನು ಸರಿಮಾಡಬೇಕೆಂದು ನಿರ್ದೇಶನವನ್ನೂ ಕೊಡಿಸಿದೆ. ಎರಡನೆಯದು ನಮ್ಮ ಜಮೀನನ್ನು ಆಂಧ್ರಕ್ಕೆ ಕೊಟ್ಟಿದ್ದರ ಬಗ್ಗೆ ರಿಟ್ ಪಿಟೀಶನ್ ಹಾಕಿದವನೇ ನಾನು. ನಾನೇ ಖುದ್ದು ಚೌಲ್ಟ್ರಿಯ ಪರಿಸ್ಥಿತಿ ನೋಡಿ ಮಾಡಿದ್ದು. ಇಷ್ಟು ಹೊತ್ತಿಗೆ ಬರುತ್ತೇವೆ ಎಂದು ಕಾಗದ ಬರೆದು ಹೋಧೆವು, ಆದರೆ ಬೇರೆಯವರಿಗೆ ಕೊಟ್ಟುಬಿಟ್ಟಿದ್ದೇವೆ ಅಂದರು, ನಾವು ಇಂಥಿಂಥವರು ಎಂದು ಹೆಸರು ಹೇಳಲಿಲ್ಲ, ಬೆಂಗಳೂರಿಂದ ಬಂದಿದೀವಪ್ಪ ದಯವಿಟ್ಟು ಜಾಗ ಕೊಡಿ ಅಂದೆವು. ಇಲ್ಲ ಸಾರ್ ಆಗೋಲ್ಲ, ಲೇಟಾಗಿಬಿಟ್ಟಿದೆ ಅಂದರು. ಜೊತೆಗೆ ನೀವೇನಾದರೂ ಸ್ವಲ್ಪ ಯೋಚನೆ ಮಾಡುವುದಾದರೆ ಮಾಡುತ್ತೇವೆ ಸ್ವಲ್ಪ ಟೈಮಾಗುತ್ತದೆ ಅಂದರು. 10-15 ನಿಮಿಷವಾದ ಮೇಲೆ ಇನ್ನೊಬ್ಬರ ಹತ್ತಿರ ಹೋದರು, ಅಲ್ಲಿಂದ ಬಂದು ನೂರು ರೂಪಾಯಿಗಳನ್ನು ಹೆಚ್ಚು ಕೊಡುವುದಾದರೆ ಆಗಬಹುದು ಅಂದರು. ಯಾಕಪ್ಪ ಅಂದರೆ ಸ್ವಾಮಿ ಹಿಂದಿನ ಸರ್ಕಾರದ ಸಚಿವರಿಗೆ ನಾವು ಕೊಟ್ಟು ಬಂದಿದ್ದೇವೆ ಅಂದರು. ಸಾರ್ವಜನಿಕ

ಹಿತಾಸಕ್ತಿಯನ್ನು ಇದರ ಬಗ್ಗೆ ಹಾಕಿದ್ದೇನೆ. ಅಲ್ಲಿ ತರಾತುರಿಯಲ್ಲಿ ಕಟ್ಟಡವನ್ನು ಮಾಡಬೇಕು ಎಂದು ಪ್ರಯತ್ನಪಟ್ಟರು.

ಅಧ್ಯಕ್ಷರು: ಇಲ್ಲಿ ಒಂದು ಪ್ರಶ್ನೆ ಕೇಳಬೇಕು, ಅದಕ್ಕೆ ಉತ್ತರ ಪಡೆಯಬೇಕು. ತಾವು ಭಾಷಣ ಮಾಡಬೇಕು ಎಂದು ಹೇಳಿ ಹೊರಟಿದ್ದೀರಿ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಇಲ್ಲಿ ಆಂಧ್ರಪ್ರದೇಶದ ಚೌಲ್ಟ್ರಿ ಇದೆ. ತಮಿಳುನಾಡಿನ ಚೌಲ್ಟ್ರಿ ಇದೆ. ಕರ್ನಾಟಕದ ಯಾತ್ರಾರ್ಥಿಗಳು ಹೋದಾಗ ಮಾತ್ರ ಏಕೆ ತೊಂದರೆಯಾಗುತ್ತಿದೆ? ಕರ್ನಾಟಕದ ಚೌಲ್ಟ್ರಿಗಳು ಅಲ್ಲಿ ಯಾವ ಗತಿಯಲ್ಲಿದೆ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಾಬುರಾವ್ ಚಿಂಚನಸೂರ್: ಮಾನ್ಯ ಅಧ್ಯಕ್ಷರೇ, ಇದು ಕೋರ್ಟಿನಲ್ಲಿದೆ. ನಾವು ಇದರ ಬಗ್ಗೆ ಮಾತನಾಡುವುದು ಅನಾವಶ್ಯಕವಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಅಲ್ಲಿ ಕರ್ನಾಟಕದ ಚೌಲ್ಟ್ರಿಯನ್ನು ಕಟ್ಟಿದಂಥ ಮಹಾನುಭಾವರು ಎಂ.ವಿ.ಕೃಷ್ಣಪ್ಪನವರು, ಕಂದಾಯ ಮತ್ತು ಮುಜರಾಯಿ ಖಾತೆಯನ್ನು ಹೊಂದಿದಂಥ ನಿಮ್ಮ ಅಣ್ಣನವರು ಆ ಕಾಲದಲ್ಲಿಯೇ ಅಲ್ಲಿ ಚೌಲ್ಟ್ರಿಯನ್ನು ಕಟ್ಟಿಸಿದರು. ಆ ಸಮಯದಲ್ಲಿ ನಾವು ಅಲ್ಲಿಗೆ ಹೋದರೆ ಅಲ್ಲಿ ಉಳಿಯಬೇಕು ಎನ್ನುವ ಆಸೆ ಹುಟ್ಟುತ್ತಿತ್ತು. ಈಗ ಅಲ್ಲಿಗೆ ಹೋದರೆ ಎಷ್ಟು ಬೇಗ ಆಚೆಗೆ ಹೋಗುತ್ತೇವೋ ಎನ್ನುವಂತಾಗುತ್ತದೆ. ಬೆಡ್‌ಶೀಟ್ ಇರಬಹುದು, ತಿಗಣೆ ಇರಬಹುದು, ಕರೆಂಟ್ ಇರಬಹುದು, ನೀರು ಇರಬಹುದು. ಯಾವುದೂ ಕೂಡ ಅಲ್ಲಿ ಸಮರ್ಪಕವಾಗಿಲ್ಲ. ನಾವು ಹೋದರೆ ಆಂಧ್ರ ಚೌಲ್ಟ್ರಿಗಳಲ್ಲಿ ನಾವು ಉಳಿಯುತ್ತಿದ್ದೇವೆ. ಸ್ವಚ್ಛತೆ ಬಗ್ಗೆ ಒಂದು ಚೂರು ಕೂಡ ಗಮನಹರಿಸುತ್ತಿಲ್ಲ. ಅಲ್ಲಿ ಅಧಿಕಾರಿಗಳು ಏಕೆ ಇದ್ದಾರೋ ನನಗಂತೂ ಗೊತ್ತಿಲ್ಲ. ಜೊತೆಗೆ ನಮ್ಮ ರಾಜ್ಯದವರು ಹೋದರೆ ಮಾತ್ರ ರೂಮುಗಳು ಸಿಗುವುದಿಲ್ಲ. ಬೇರೆ ರಾಜ್ಯದವರು ಹೋದರೆ ಅವರುಗಳಿಗೆ ರೂಮು ಸಿಗುತ್ತದೆ. ಆಂಧ್ರದವರು ಮೂರು ವಸತಿಗೃಹಗಳನ್ನು ಕಟ್ಟಿಸಿದ್ದಾರೆ. ಎಷ್ಟು ಚೆನ್ನಾಗಿವೆ ಎಂದು ತಾವು ಕೂಡ ನೋಡಿದ್ದೀರಿ. ಅಲ್ಲಿ ನೀರಿಗೂ ಸಮಸ್ಯೆ ಇದೆ. ಆದರೆ ಅಲ್ಲಿ ಡ್ಯಾಮನ್ನು ಕಟ್ಟಿದಮೇಲೆ ನೀರಿಗೆ ತೊಂದರೆ ಇರಬಾರದು. ಮೆಯಿನ್‌ಟೆನೆನ್ಸ್ ಇಲ್ಲ. ಇದಕ್ಕೇನು ದುಡ್ಡೇ ಇಲ್ಲವೇ? ಇದನ್ನೆಲ್ಲಾ ಮಾನ್ಯಮಂತ್ರಿಗಳು ಗಮನಿಸಬೇಕು ಎಂದು ತಮ್ಮ ಮುಖಾಂತರ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚಿಂಚನಸೂರ್: ಮಾನ್ಯ ಅಧ್ಯಕ್ಷರೇ, ಸರ್ಕಾರ ಇದರ ಬಗ್ಗೆ ಸುಮ್ಮನೆ ಕಣ್ಣುಮುಚ್ಚಿ ಕುಳಿತಿಲ್ಲ. ಈಗಾಗಲೇ 61 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ ಕೆಲಸಗಳನ್ನು ಮಾಡುತ್ತಿದ್ದಾರೆ. 15 ದಿವಸಗಳಲ್ಲಿ ನಾವು ಕಾರ್ಯಕ್ರಮಗಳನ್ನು

ಚಾಲೂ ಮಾಡುತ್ತೇವೆಂದು ನಾನು ಆಗಲೇ ಹೇಳಿದ್ದೇನೆ. ಈಗ ರೋಡ್ ವರ್ಕ್ ಚಾಲೂ ಆಗಿದೆ.

SRI K.N.SUBBAREDDY: Special Officer, wo is in charge of the choultry, must be transferred immediately.

ಒಬ್ಬ ಸದಸ್ಯರು: ಯಾರು ಹೆಚ್ಚು ಹಣ ಕೇಳುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

MR.SPEAKER: You please, examine all the aspects.

ಶ್ರೀ ಬಾಬುರಾವ್ ಚಿಂಚನಸೂರ್: ನಾನು ಎಲ್ಲದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ತಾವು ಕೂಡ ಒಂದು ವಾರದ ಹಿಂದೆ ತಿರುಪತಿಗೆ ಹೋಗಿದ್ದೀರಿ.

ಅಧ್ಯಕ್ಷರು: ಒಂದು ವಾರದ ಹಿಂದೆ ನಾನು ಹೋಗಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ ; 15 ದಿವಸಗಳ ಹಿಂದೆ ಹೋಗಿದ್ದೀರಿ.

ಅಧ್ಯಕ್ಷರು: ಹೋಗಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್ (ಸಾರಿಗ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸುಬ್ಬಾರೆಡ್ಡಿಯವರು ತಿರುಪತಿಗೆ ಹೋಗಿ ಬಂದಿದ್ದು ಯಾವಾಗ ಎಂದು ನನಗೆ ಗೊತ್ತಾಗಬೇಕು.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ನಾನು ಹೋಗಿಬಂದು ಒಂದು ತಿಂಗಳಾಯಿತು. ಆ ಸ್ಪೆಷಲ್ ಆಫೀಸರನ್ನು ಮೊದಲು ಟ್ರಾನ್ಸ್‌ಫರ್ ಮಾಡಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ನಾನು ಹತ್ತಾರು ಬಾರಿ ತಿರುಪತಿಗೆ ಹೋಗಿ ಬಂದಿದ್ದೇನೆ. ನನಗೆ ಆಸಕ್ತಿ ಇದೆ. ಅಲ್ಲಿ ಇರುವ ದೇವಾಲಯದ ಮೇಲೆ ನನಗೆ ಗೌರವ ಇರುವುದರಿಂದ ಹತ್ತು ಬಾರಿ ನಾನು ತಿರುಪತಿಗೆ ಹೋಗಿಬಂದಿದ್ದೇನೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಶ್ರೀ ರಾಜೇಂದ್ರವರ್ಮ. ಸಪ್ಲಿಮೆಂಟ್ರೀಸ್ ಬೇಕಾದಷ್ಟು ಆಯಿತು. 15 ಪ್ರಶ್ನೆಗೆ 4 ನಿಮಿಷಗಳಂತೆ 60 ನಿಮಿಷಗಳಾಗುತ್ತದೆ. ಒಂದೊಂದು ಪ್ರಶ್ನೆಗೆ 4 ನಿಮಿಷ ಅಷ್ಟೆ.

ಶ್ರೀ ಹೆಚ್.ಸಿ.ಬಸವರಾಜ್: ಇಲ್ಲಿ ಮಾತನಾಡುವವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಿ. ದಯಮಾಡಿ ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಅಂಥದ್ದೇನೂ ಇಲ್ಲ. ಯಾರು ಮುಖ್ಯ ಪ್ರಶ್ನೆ ಕೇಳಿರುತ್ತಾರೆ, ಅವರಿಗೆ ಒಂದೂ ಎರಡೊ ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡಬೇಕು. ಇದು ಜನರಲ್ ಪ್ರಶ್ನೆಯಾಗಿರುವುದರಿಂದ ಎಲ್ಲರಿಗೂ ಅವಕಾಶ ಕೊಟ್ಟಾಗಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಹೆಚ್.ಸಿ.ಬಸವರಾಜ್: ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟ ಉತ್ತರ ಸಮರ್ಪಕವಾಗಿಲ್ಲ. ಅದಕ್ಕೆ ನನಗೆ ಸಂದೇಹ ಇದೆ. ದಯಮಾಡಿ ಸರ್ಕಾರ ಅದಕ್ಕೆ ಉತ್ತರ ಕೊಡಲಿ. ಅಲ್ಲಿ ಪ್ರಶ್ನೆಯಲ್ಲಿ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಶ್ನೆ ಕೇಳಿರುವುದು. ಆ ಸವಲತ್ತುಗಳ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎಂದು ನಮಗೆ ತಿಳಿಸಬೇಕು. ಸರ್ಕಾರ ಇದರ ಬಗ್ಗೆ ಸರಿಯಾದ ಉತ್ತರ ಕೊಟ್ಟಿಲ್ಲ. ನಮಗೆ ಜಾರಿಕೆ ಉತ್ತರ ಕೊಟ್ಟರೆ ಹೇಗೆ?

ಅಧ್ಯಕ್ಷರು: ಅಡಿಷನಲ್ ಗ್ರಾಂಟನ್ನು ರಿಲೀಸ್ ಮಾಡಿ ಕೆಲಸ ಕಾರ್ಯಗಳನ್ನು ಇಷ್ಟರಲ್ಲೇ ಪ್ರಾರಂಭಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಹೆಚ್.ಸಿ.ಬಸವರಾಜ್: ಉತ್ತರ ಸಮರ್ಪಕವಾಗಿಲ್ಲ. ಸರ್ಕಾರ ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದೆ. ಈ ವಿಷಯ ಇವತ್ತು ಕೋರ್ಟಿನಲ್ಲಿದೆ. ಇದಕ್ಕೆ ಬದಲಿ ವ್ಯವಸ್ಥೆ ಏನು ಮಾಡಿದ್ದೀರಿ? ಲಕ್ಷಾಂತರ ಯಾತ್ರಾರ್ಥಿಗಳು ಅಲ್ಲಿಗೆ ಹೋಗುವವರ ಕಥೆಯೇನು? ಶಾಸಕರಿಗೆ ಲಂಚ ಕೇಳುವ ಪರಿಸ್ಥಿತಿ ಇರುವಾಗ ಇನ್ನು ಜನಸಾಮಾನ್ಯರ ಗತಿಯೇನು ಎಂದು ಹೇಳಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಬಾಬುರಾವ್ ಚಿಂಚನಸೂರ್: ಮಾನ್ಯ ಅಧ್ಯಕ್ಷರೇ, ಈಗ ರೋಡ್ ಕೆಲಸ ಪ್ರಾರಂಭವಾಗಿದೆ. 15 ದಿನಗಳೊಳಗೆ ಎಲ್ಲಾ ರಿಪೇರಿ ವರ್ಕ್‌ಗಳೂ ಪ್ರಾರಂಭವಾಗುತ್ತವೆ. ನಮ್ಮ ಸರ್ಕಾರದ ಅವಧಿಯಲ್ಲಿ ನಾವು ಕೆಲಸವನ್ನು ಮಾಡಿ ತೋರಿಸುತ್ತೇವೆ.

Police protection to people Representatives

18 (450)